61

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.2060/2015/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 18.7.2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ: ನೆಲಮಂಗಲ ತಾಲ್ಲೂಕು ಕೆ.ಜಿ.ಶ್ರೀನಿವಾಸಪುರ ಗ್ರಾಮದ ಖಾನೆಷುಮಾರಿ ಸಂ.9/1 ಮತ್ತು 9/2 ಇವುಗಳ ಖಾತೆಯನ್ನು ಕಾನೂನು ಪ್ರಕಾರ ದೂರುದಾರರ ಹೆಸರಿನಲ್ಲಿ ಬದಲಾವಣೆ ಮಾಡಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವ ಬಗ್ಗೆ.**

*******

ಶ್ರೀ. ಸಿದ್ದಪ್ಪ, ಹೊನ್ನಾಪುರದ ನಿವಾಸಿ, ತಿಪ್ಪಸಂದ್ರ ಹೋಬಳಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಮತ್ತು ಕಾರ್ಯದರ್ಶಿಗಳು, ಹೊನ್ನೇನಹಳ್ಳಿ ಗ್ರಾಮಪಂಚಾಯತಿ, ನೆಲಮಂಗಲ ತಾಲ್ಲೂಕು, (ಇನ್ನು ಮುಂದೆ "ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ನೆಲಮಂಗಲ ತಾಲ್ಲೂಕು ಕೆ.ಜಿ.ಶ್ರೀನಿವಾಸಪುರ ಗ್ರಾಮದ ಖಾನೆಷುಮಾರಿ ಸಂ. 9/1 ಮತ್ತು 9/2 ಆಸ್ತಿಗಳು ದೂರುದಾರ ಮತ್ತು ಅವರ ಸಹೋದರ ವೆಂಕಟಸ್ವಾಮಯ್ಯನವರ ಮಾಲ್ಕಿ ಮತ್ತು ಸ್ವಾಧೀನದಲ್ಲಿರುತ್ತವೆ. ದೂರುದಾರರು 28*10 ಅಡಿ ಅಳತೆಯ ನಿವೇಶನದ ಜಾಗದ ಮಧ್ಯಭಾಗದಲ್ಲಿ ಮನೆ ಕಟ್ಟಿರುತ್ತಾರೆ. ಆದರೆ ಪಕ್ಕದ ಮನೆಯವರಾದ ಶ್ರೀಮತಿ ಮರಿಯಮ್ಮ ಗಂಡ ಗರುಡಯ್ಯ ಮತ್ತು ಅವರ ಮಕ್ಕಳು ದೂರುದಾರರ ಸ್ವಾಧೀನಕ್ಕೆ ತೊಂದರೆ ಕೊಡಲು ಪ್ರಾರಂಭಿಸಿದ್ದರಿಂದ ದೂರುದಾರರು ಒ.ಎಸ್.13/1986 ಎಂಬ ದಾವೆಯನ್ನು ಶಾಶ್ವತ

ನಿರ್ಬಂಧಕಾಜ್ಞೆ ಕೋರಿ ದಾಖಲಿಸಿದ್ದು, ಅದು ಡಿಕ್ರಿಯಾಗಿರುತ್ತದೆ. ಆ ಡಿಕ್ರಿಯ ವಿರುದ್ದ ಶ್ರೀಮತಿ ಮರಿಯಮ್ಮ ಆರ್.ಎ.68/2003ರಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಅದರಲ್ಲಿ ಒ.ಎಸ್.13/1986ರ ಕೆಳ ನ್ಯಾಯಾಲಯದ ಡಿಕ್ರಿಯನ್ನು ವಜಾಮಾಡಲಾಗಿರುತ್ತದೆ. ಈ ಆದೇಶದ ವಿರುದ್ಧ ದೂರುದಾರರು ಆರ್.ಎಸ್.ಎ.1863/2007 ಎಂಬ ಮೇಲ್ಮನವಿಯನ್ನು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದು ಅದರಲ್ಲಿ ಯಥಾಸ್ಥಿತಿ ಕಾಪಾಡುವಂತೆ ಉಭಯಪಕ್ಷಕಾರರಿಗೆ ನಿರ್ದೇಶಿಸಿದ್ದು, ಮೇಲ್ಮನವಿ ಚಾಲ್ತಿಯಲ್ಲಿರುತ್ತದೆ. ಆದರೆ ಈ ಅವಧಿಯಲ್ಲಿ ಪಿಡಿಒ, ಹೊನ್ನೇನಹಳ್ಳಿ ಅವರು ಆಸ್ತಿ ನಂ.9/1 ಮತ್ತು 9/2ರ ಖಾತೆಯನ್ನು ಮರಿಯಮ್ಮನ ಹೆಸರಿನಲ್ಲಿ ಬದಲಾವಣೆ ಮಾಡಿರುತ್ತಾರೆ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. ಎದುರುದಾರರಿಗೆ ಆಕ್ಷೇಪಣೆಯನ್ನು ಕೇಳಿ, ನೋಟೀಸು ಕಳುಹಿಸಿದ್ದು, ಆದರೆ ಆಕ್ಷೇಪಣೆ ಸಲ್ಲಿಸಿರುವುದಿಲ್ಲ. ಸ್ವೀಕೃತಿ ಬಂದಿರುತ್ತವೆ. ಆದ್ದರಿಂದ ಎದುರುದಾರರ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಲಾಗಿದೆ.

4. ದೂರುದಾರರು ಸಲ್ಲಿಸಿದ ದೂರು ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ಒ.ಎಸ್.13/1986 ದಾವೆಯು ದೂರುದಾರರು ಮರಿಯಮ್ಮನವರ ವಿರುದ್ಧ ತಮ್ಮ ಆಸ್ತಿಯ ಅನುಭೋಗಕ್ಕೆ ತೊಂದರೆಯುಂಟುಮಾಡಬಾರದೆಂದು ಶಾಶ್ವತ ನಿರ್ಭಂಧಕಾಜ್ಞೆ ಕೋರಿ ದಾಖಲಿಸಿದ್ದು, ಅದು ವಿಚಾರಣೆಯಾಗಿ ದೂರುದಾರರ ಪರವಾಗಿ ಡಿಕ್ರಿ ಮಾಡಲಾಗಿರುತ್ತದೆ. ಆದರೆ ಮೇಲ್ಮನವಿ ನ್ಯಾಯಾಲಯದಲ್ಲಿ ಈ ಡಿಕ್ರಿಯನ್ನು ವಜಾಗೊಳಿಸಲಾಗಿರುತ್ತದೆ. ಇದರಿಂದ ಭಾಧಿತರಾದ ದೂರುದಾರರು ಆರ್.ಎಸ್.ಎ.1863/2007 ಮೇಲ್ಮನವಿಯನ್ನು ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದು, ಅದು ಚಾಲ್ತಿಯಲ್ಲಿರುತ್ತದೆ.

5. ದೂರುದಾರರು ತಮ್ಮ ದೂರಿನೊಂದಿಗೆ ಪಿಡಿಒ ಹೊನ್ನೇನಹಳ್ಳಿ ಗ್ರಾಮ ಪಂಚಾಯತಿಯವರು ದಿ.9.4.2015ರಂದು ನೀಡಿದ ಹಿಂಬರಹ ಸಲ್ಲಿಸಿದ್ದು ಅದನ್ನು ಪರಿಶೀಲಿಸಿದಾಗ ಖಾತೆ ನಂ.9/1 ಮತ್ತು 9/2 ಇವುಗಳನ್ನು ಮರಿಯಮ್ಮನ ಹೆಸರಿನಲ್ಲಿ ಕೋರ್ಟ್ ಆದೇಶದಂತೆ 2003ರಲ್ಲಿ ಖಾತೆ ಬದಲಾವಣೆ

ಮಾಡಲಾಗಿದೆಯೆಂದು ನಮೂದಿಸಿರುತ್ತಾರೆ. ಪಂಚಾಯತಿ ಡಿಮಾಂಡ್ ರಿಜಿಸ್ಟರ್ ಹಾಜರುಪಡಿಸಿದ್ದು ಅದರಲ್ಲಿ ಮರಿಯಮ್ಮನ ಹೆಸರಿನಲ್ಲಿ ಖಾತೆ ದಾಖಲಾಗಿರುತ್ತದೆ.

6. ದೂರುದಾರರು ಶಾಶ್ವತ ನಿರ್ಬಂಧಕಾಜ್ಞೆ ದಾವೆ ದಾಖಲಿಸಿದ್ದು, ಅದು ಡಿಕ್ರಿಯಾದಾಗ ಮೇಲ್ಮನವಿಯಲ್ಲಿ ಡಿಕ್ರಿಯನ್ನು ವಜಾಗೊಳಿಸಲಾಗಿದೆ. ಹೀಗಾಗಿ ಮೇಲ್ಮನವಿ ಆರ್.ಎ.68/2003ರ ಆದೇಶದ ಮೇರೆಗೆ ಮರಿಯಮ್ಮನ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಲು ಬರುವುದಿಲ್ಲ. ಆದರೆ ಆಗಿನ ಪಂಚಾಯತಿ ಅಧಿಕಾರಿಗಳು 2003ರಲ್ಲಿಯೇ ಖಾತೆ ಬದಲಾವಣೆ ಮಾಡಿರುವುದು ಕಂಡುಬರುತ್ತದೆ. ಒ.ಎಸ್.13/1986ರ ತೀರ್ಪಿನಲ್ಲಿ ದೂರುದಾರರ ಆಸ್ತಿಯ ಸ್ವಾಧೀನತೆ ಬಗ್ಗೆ ಚರ್ಚಿಸಿ ಅವರು ಸ್ವಾಧೀನದಲ್ಲಿದ್ದು, ಅವರ ಸ್ವಾಧೀನಕ್ಕೆ ತೊಂದರೆಯುಂಟುಮಾಡದಂತೆ ಹಾಗೂ ಮರಿಯಮ್ಮ ಅತಿಕ್ರಮಿಸಿಕೊಂಡು ಕಟ್ಟಿರುವ ಗೋಡೆಯನ್ನು ತೆರವುಗೊಳಿಸುವಂತೆ ಡಿಕ್ರಿ ನೀಡಲಾಗಿದೆ. ಹೀಗಾಗಿ ದೂರುದಾರರು ಈ ಆಸ್ತಿಯ ಕಾನೂನುಬದ್ಧ ಸ್ವಾಧೀನತೆ ಹೊಂದಿರುವುದರಿಂದ ಯಾವುದೇ ದಾಖಲೆ ಅಥವಾ ನ್ಯಾಯಾಲಯದ ಆದೇಶವಿಲ್ಲದೆ ಮರಿಯಮ್ಮನ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಿರುವುದು ಅಕ್ರಮವೆಂದು ಕಂಡುಬರುತ್ತದೆ.

7. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(1)ರಡಿ ಪ್ರದತ್ತವಾದ ಅಧಿಕಾರದಡಿಯಲ್ಲಿ **ನೆಲಮಂಗಲ ತಾಲ್ಲೂಕು ಕೆ.ಜಿ.ಶ್ರೀನಿವಾಸಪುರ ಗ್ರಾಮದ ಖಾನೆಷುಮಾರಿ ಸಂ.9/1 ಮತ್ತು 9/2 ಇವುಗಳ ಖಾತೆಯನ್ನು ಕಾನೂನು ಪ್ರಕಾರ ದೂರುದಾರರ ಹೆಸರಿನಲ್ಲಿ ಬದಲಾವಣೆ ಮಾಡಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು** ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 18/7/17.

**(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)**

**ಉಪಲೋಕಾಯುಕ್ತರು, ಕರ್ನಾಟಕ ರಾಜ್ಯ.**

18/7